ಶ್ರೀ ಶಿವಾನಂದ ಪಾಟೀಲ್ :- ಅಷ್ಟೇ ನಮಗೆ ಬೇಕಾಗಿರುವುದು. ಆ ರೀತಿಯ ಉತ್ತರವನ್ನು ನಮಗೆ ಕೊಡಿಸಿ.

(ಆ) <u>ತುಮಕೂರು ವಿಶ್ವವಿದ್ಯಾಲಯದ ಕಟ್ಟಡದ ಬಗ್ಗೆ :</u>

ಶ್ರೀ ಹೆಚ್. ನಿಂಗಪ್ಪ :- ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯ ದಿವಸದಿಂದಲೂ ಕೂಡ ಒಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಅನುಮತಿಗೋಸ್ಕರ ಕಾಯುತ್ತಿದ್ದೆ. ಇವೊತ್ತು ನೀವು ನನಗೆ ಅನುಮತಿಯನ್ನು ಕೊಟ್ಟಿದ್ದೀರಿ, ಬಹುಶಃ ಅದೂ ಯಾರೂ ಇಲ್ಲದಂಥ ಸಂದರ್ಭದಲ್ಲಿ. ಇವೊತ್ತು ನಾನು ಪ್ರಸ್ತಾಪ ಮಾಡಬೇಕೆಂದಿರುವ ವಿಚಾರವೇನೆಂದರೆ ಸುಮಾರು ಎರಡೂವರೆ ವರ್ಷಗಳ ಹಿಂದೆ ತುಮಕೂರು ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಪ್ರಾರಂಭವಾದ ಮೇಲೆ ಆ ವಿಶ್ವವಿದ್ಯಾಲಯವನ್ನು ಉದ್ಘಾಟನೆ ಮಾಡುವುದಕ್ಕೆ ಸುಮಾರು ಎರಡು ವರ್ಷಗಳ ಕಾಲ ಕಾಯಬೇಕಾಗಿ ಬಂತು. ಆದರೆ ಇವೊತ್ತು ಆ ವಿಶ್ವವಿದ್ಯಾಲಯದ ಸ್ಥಿತಿಗತಿ ಹೇಗಿದೆ ಎಂದರೆ ಮೂಲಭೂತ ಸೌಕರ್ಯಗಳಿಲ್ಲ, ಸ್ವಂತ ಕಟ್ಟಡವಿಲ್ಲ, ಕಟ್ಟಡ ನಿರ್ಮಾಣ ಮಾಡಬೇಕಾದರೆ ಅವಶ್ಯಕವಾಗಿರತಕ್ಕಂಥ ಭೂಮಿ ಕೂಡ ಇವೊತ್ತಿಗೂ ಸರ್ಕಾರ ವತಿಯಿಂದ ಕೊಡತಕ್ಕಂಥ ಒಂದು ಕೆಲಸ ನಡೆದಿಲ್ಲ. ಹಿಂದೆ ದೇವರಾಯನದುರ್ಗದ ಪ್ರದೇಶದಲ್ಲಿ ಏನು ಹುಲ್ಲುಬಂದಿ ಎಂದು ಇತ್ತೋ ಆ ಹುಲ್ಲುಬಂದಿ ಪ್ರದೇಶವನ್ನು ವಿಶ್ವವಿದ್ಯಾಲಯದ ಕಟ್ಟಡ ನಿರ್ಮಾಣಕ್ಕೋಸ್ಕರ ಸ್ವಾಧೀನಪಡಿಸಿಕೊಂಡಂಥ ಒಂದು ಕೆಲಸವಾಗಿತ್ತು. ಆದರೆ ಅದು ಬಹಳ ಹಿಂದಿನ ದಾಖಲೆಯಲ್ಲಿ ಅರಣ್ಯ ಭೂಮಿ ಎಂದು ಏನು ದಾಖಲಾಗಿತ್ತೋ ಆ ಕಾರಣದಿಂದ ಅದನ್ನು ಕೊಡುವುದಕ್ಕೆ ಬರುವುದಿಲ್ಲ, ಪರಿಸರ ಹಾಳಾಗುತ್ತದೆ ಎನ್ನುವ ಕಾರಣವನ್ನು ಮುಂದಿಟ್ಟು ಪರಿಸರವಾದಿಗಳು ಸುಪ್ರೀಂಕೋರ್ಟ್‌ವರೆಗೂ ಹೋದಂಥ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಇವೊತ್ತು ತುಮಕೂರು ತಾಲ್ಲೂಕಿನಲ್ಲಿ ಸುಮಾರು ಕಡೆ ಸರ್ಕಾರಿ ಜಮೀನಿದೆ. ಅದರಲ್ಲೂ ಕೂಡ ರೆವಿನ್ಯೂ ಲ್ಯಾಂಡ್, ಗೋಮಾಳಕ್ಕೆ ಸೇರಿದಂಥ ಜಮೀನಿದೆ. ಆ ಜಮೀನನ್ನು ಇವೊತ್ತು ಸ್ವಾಧೀನಕ್ಕೆ ತೆಗೆದುಕೊಂಡು ವಿಶ್ವವಿದ್ಯಾಲಯದ ಕಟ್ಟಡವನ್ನು ಕಟ್ಟುವುದಕ್ಕೆ ಅದನ್ನು ಉಪಯೋಗಿಸಿಕೊಳ್ಳಬಹುದಾಗಿತ್ತು. ಆದರೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಇದುವರೆವಿಗೆ ಯಾವುದೇ ಒಂದು ಕ್ರಮವನ್ನು ಕೈಗೊಂಡಿಲ್ಲ. ಇವೊತ್ತು ತುಮಕೂರು ಜಿಲ್ಲೆಗೆ ಸೀಮಿತವಾಗಿ ಸ್ಥಾಪನೆಯಾಗಿರತಕ್ಕಂಥ

ವಿಶ್ವವಿದ್ಯಾಲನಿಲಯ. ಹಿಂದೆ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಮಂಜೂರಾದಂಥ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳನ್ನು ಒಳಗೊಂಡಂಥ ಪ್ರದೇಶಗಳನ್ನು ಸೇರಿಸಿ ಒಂದು ವಿಶ್ವವಿದ್ಯಾನಿಲಯವಾಗಿತ್ತು. ಆದರೆ ತದನಂತರ ಬೆಂಗಳೂರು ಗ್ರಾಮಾಂತರದವರು, ಕೋಲಾರದವರು ಮತ್ತು ಚಿತ್ರದುರ್ಗದವರು ನಾವು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸೇರುವುದಿಲ್ಲ, ನಾವು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿಯೇ ಸೇರುತ್ತೇವೆ ಎನ್ನತಕ್ಕಂಥ ಒಂದು ಒತ್ತಾಯವನ್ನು ಮುಂದಿಟ್ಟಂಥ ಸಂದರ್ಭದಲ್ಲಿ ಇದೇ ಸದನದಲ್ಲಿ ಆ ವಿಷಯ ಚರ್ಚೆಯಾಯಿತು. ಸದನದಲ್ಲಿ ಚರ್ಚೆಯಾದ ನಂತರ ತುಮಕೂರು ಜಿಲ್ಲೆಗೆ ಮಾತ್ರ ಸೀಮಿತವಾಗಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದೆ.

ಆದರೆ ಆ ಸ್ಥಾಪನೆಯಾದಂಥ ವಿಶ್ವವಿದ್ಯಾನಿಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದಂಥ ಕೆಲಸವನ್ನು ಸರ್ಕಾರ ಏನು ಮಾಡಬೇಕಾಗಿತ್ತೋ ಆ ಕೆಲಸವನ್ನು ಮಾಡುವುದರಲ್ಲಿ ಬಹಳ ವಿಳಂಬವಾಗಿದೆ. ಬಹಳ ನಿಧಾನಗತಿಯಲ್ಲಿ ಕೆಲಸ ಸಾಗುತ್ತಿದೆ ಎನ್ನತಕ್ಕಂಥಾದ್ದು ತುಂಬಾ ವಿಷಾದದ ಸಂಗತಿಯಾಗಿದೆ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಇದು ಒಂದು ಜಿಲ್ಲೆಗೆ, ಜಿಲ್ಲೆಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಿರತಕ್ಕಂಥ ಪ್ರಮುಖವಾದ ವಿಚಾರವಾಗಿದೆ. ಆದರೆ ನಾನು ಇದನ್ನು ಸದನದ ಮುಂದೆ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡತಕ್ಕಂಥವರು ಮತ್ತು ಒಂದು ಪ್ರಮುಖ ತೀರ್ಮಾನವನ್ನು ತೆಗೆದುಕೊಳ್ಳಬೇಕಾದ ಸಚಿವರು ಕೂಡ ಇಂದು ಈಗ ಸದನದಲ್ಲಿ ಇಲ್ಲದೇ ಇರುವುದರಿಂದ ನಾನು ಇವೊತ್ತು ಏನು ಮಾತನಾಡಿದರೂ ಏನು ಪ್ರಯೋಜನ ಎನ್ನತಕ್ಕಂಥದ್ದು ನನ್ನ ಮನಸ್ಸಿಗೆ ಬಂದಿದೆ. ಆದುದರಿಂದ ನನಗೆ ಇಂದು ಮಾತನಾಡುವುದಕ್ಕೂ ಕೂಡ ಆಸಕ್ತಿ ಕಡಿಮೆಯಾಗುತ್ತಿದೆ. ಆದರೂ ಕೂಡ ನಾನು ಈ ಸದನದ ಮೂಲಕ ಸರ್ಕಾರದ ಗಮನ ಸೆಳೆಯಲು ಪ್ರಯತ್ನ ಮಾಡುತ್ತಿದ್ದೇನೆ. ಇವೊತ್ತು ತುಮಕೂರು ವಿಶ್ವವಿದ್ಯಾಲಯ ಪ್ರಾರಂಭವಾಗಿ ಎರಡೂವರೆ ವರ್ಷಗಳಾದರೂ ಕೂಡ ಇವೊತ್ತು ಜಮೀನನ್ನು ಸ್ವಾಧೀನಪಡಿಸಿಕೊಂಡು ಆ ಜಮೀನಿನಲ್ಲಿ ಇವೊತ್ತು ವಿಶ್ವವಿದ್ಯಾನಿಲಯವನ್ನು ಕಟ್ಟತಕ್ಕಂಥ ಕೆಲಸ ಇದುವರೆವಿಗೂ ನಡೆದಿಲ್ಲ.

ಬಹಳ ಮಂದಗತಿಯಲ್ಲಿ ಆ ಒಂದು ಜಮೀನು ಸ್ವಾಧೀನದ ಪ್ರಕ್ರಿಯೆ ಇವೊತ್ತಿಗೂ ನಡೆಯುತ್ತಿದೆ. ಇವೊತ್ತು ಪ್ರಾರಂಭದಲ್ಲಿ ಹೇಳಿದರು. ತುಮಕೂರು ಪಕ್ಕದಲ್ಲಿಯೇ ಇರತಕ್ಕಂಥ ಮಲ್ಲಸಂದ್ರದ ಹತ್ತಿರ ನಾವು ಜಮೀನು ತೆಗೆದುಕೊಳ್ಳುತ್ತಿದ್ದೇವೆ

ಎಂದು ಹೇಳಿದರು. ಮತ್ತೆ ಗೂಳೂರು ಹತ್ತಿರ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಮತ್ತೆ ಬಿದರುಕಟ್ಟೆ ಜಮೀನು ಎಂದು ಹೇಳಿದರು. ಆ ಬಿದರುಕಟ್ಟೆ ಪ್ರದೇಶದಲ್ಲಿ ಸುಮಾರು ಐದನೂರು ಎಕರೆ ಸರ್ಕಾರಿ ಜಮೀನಿದೆ. ಆ ಸರ್ಕಾರಿ ಜಮೀನನ್ನಾದರೂ ಕೂಡ ವಿದ್ಯಾ ಇಲಾಖೆಯ ಸ್ವಾಧೀನಕ್ಕೆ ತೆಗೆದುಕೊಂಡು ಇವೊತ್ತು ವಿಶ್ವವಿದ್ಯಾನಿಲಯವನ್ನು ನಿರ್ಮಾಣ ಮಾಡಬಹುದಾಗಿತ್ತು. ಆ ಕೆಲಸವನ್ನೂ ಕೂಡ ಇವತ್ತಿಗೂ ಇನ್ನೂ ಮಾಡಿಲ್ಲ. ಆದುದರಿಂದ ಹಿಂದೆ ತುಮಕೂರು ವಿಶ್ವವಿದ್ಯಾನಿಲಯ ಏನು ಸ್ಥಾಪನೆಯಾಯಿತೋ, ಆ ಸ್ಥಾಪನೆಯಾದ ದಿವಸದಿಂದಲೇ ಒಂದು ರೀತಿಯಲ್ಲಿ ಬಾಲಗ್ರಹಪೀಡಿತವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದರೂ ಕೂಡ ತಪ್ಪಾಗಲಾರದು. ಇವೊತ್ತು ಏನೊಂದು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿತ್ತೋ ಅದನ್ನೂ ಇದುವರೆವಿಗೆ ಒದಗಿಸಿಲ್ಲ. ಇವೊತ್ತು ವಿಶ್ವವಿದ್ಯಾನಿಲಯಕ್ಕೆ ಬೇಕಾಗಿರತಕ್ಕಂಥ ಅವಶ್ಯಕ ಸಿಬ್ಬಂದಿಗಳ ನೇಮಕ ಕೂಡ ಇವೊತ್ತಿಗೂ ಇನ್ನೂ ಆಗಿಲ್ಲ.

ಇವತ್ತು ಇಲ್ಲಿ ಕೆಲಸ ಮಾಡುವಂತಹ ಸಿಬ್ಬಂದಿಯನ್ನು ನೋಡಿದರೆ ಅವರು ಹಂಗಾಮಿಯಾಗಿ ನೇಮಕವಾಗಿದ್ದಾರೆ. ಕೆಲವರನ್ನು ಅಲ್ಲಿ 5–6 ತಿಂಗಳು ದುಡಿಸಿಕೊಂಡು ಮತ್ತೆ ಕೆಲಸದಿಂದ ತೆಗೆದು ಹಾಕತಕ್ಕಂಥಾದ್ದು, ಹೊಸಬರನ್ನು ತೆಗೆದುಕೊಳ್ಳುತಕ್ಕಂಥಾದ್ದು, ಅಲ್ಲಿ ಹೊಸದಾಗಿ ಬಂದಿರುವವರಿಗೆ ಅನುಭವ ಕಡಿಮೆ ಇರುವಂತಹ ವಿಚಾರವನ್ನೆಲ್ಲಾ ಇವತ್ತು ತುಮಕೂರು ವಿಶ್ವವಿದ್ಯಾಲಯದಲ್ಲಿ ನೋಡುತ್ತಿದ್ದೇವೆ. ಇವೆಲ್ಲಾ ಸಮಸ್ಯೆಗಳು ಇದ್ದಂತಹ ಸಂದರ್ಭದಲ್ಲಿ ಸರ್ಕಾರ ಇವತ್ತು ಅದರ ಬಗ್ಗೆ ತೀವ್ರವಾದ ಗಮನ ಹರಿಸಬೇಕು. ಆ ವಿಶ್ವವಿದ್ಯಾಲಯಕ್ಕೆ ತಕ್ಷಣ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಅವಶ್ಯಕವಾಗಿ ಬೇಕಾಗಿರುವಂತಹ ಕಟ್ಟಡ ನಿರ್ಮಾಣ, ಅದಕ್ಕೆ ಬೇಕಾಗಿರುವಂತಹ ಮೂಲಭೂತ ಸೌಕರ್ಯಗಳು ಮತ್ತು ವಿದ್ಯಾರ್ಥಿಗಳಿಗೆ ಏನೇನು ಅವಶ್ಯಕವಾಗಿ ಬೇಕಾಗಿದೆ, ಅದನ್ನೆಲ್ಲಾ ಒದಗಿಸಬೇಕಾದಂತಹ ಕೆಲಸವನ್ನು ಇವತ್ತು ಮಾಡಬೇಕಾಗಿದೆ.

ಜೊತೆಗೆ ಪ್ರತಿನಿತ್ಯ ತುಮಕೂರಿನಲ್ಲಿ ನೋಡುತ್ತಿದ್ದೇವೆ, ಇವತ್ತು ವಿವಿಧ ಸಂಘ ಸಂಸ್ಥೆಗಳವರು ವಿಶ್ವವಿದ್ಯಾನಿಲಯದ ನಿರ್ಮಾಣಕ್ಕೆ ಮತ್ತು ಅದಕ್ಕೆ ಮೂಲಭೂತ ಸೌಕರ್ಯವನ್ನು ಒದಗಿಸಿಕೊಡಲಿ ಎಂದು ಒತ್ತಾಯ ಮಾಡುವ ದೃಷ್ಟಿಯಿಂದ ಧರಣಿ ಮತ್ತು ಸತ್ಯಾಗ್ರಹಗಳನ್ನು ಕೂಡ ಮಾಡುತ್ತಿದ್ದಾರೆ. ಆದರೆ ಇಷ್ಟೆಲ್ಲಾ ಆದರೂ ಕೂಡ ಸರ್ಕಾರ ಏಕೆ ಅದರ ಬಗ್ಗೆ ತೀವ್ರವಾಗಿ ಗಮನ ಹರಿಸಿಲ್ಲ? ತುಮಕೂರು ವಿಶ್ವವಿದ್ಯಾನಿಲಯದ ವಿಚಾರದಲ್ಲಿ ಏಕೆ ಇಷ್ಟೊಂದು ಉದಾಸೀನ ಭಾವನೆಯನ್ನು

ತಾಳಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಇದರ ಬಗ್ಗೆ ಜಾಸ್ತಿ ಮಾತನಾಡುವುದಿಲ್ಲ. ಏಕೆಂದರೆ ಇದಕ್ಕೆ ಸಂಬಂಧಪಟ್ಟ ಸಚಿವರು ಇಲ್ಲವೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು :– ನೀವು ಈಗ ಗಮನ ಸೆಳೆದಿದ್ದೀರಿ. ಈಗ ಯಾರಾದರೂ ಉತ್ತರ ಹೇಳಿ. ನೀವು ಇನ್ನೂ ಮುಗಿಸಿಲ್ಲವೇ?

ಶ್ರೀ ಹೆಚ್. ನಿಂಗಪ್ಪ :– ಮಾನ್ಯ ಅಧ್ಯಕ್ಷರೆ, ಯಾರೂ ಇಲ್ಲದಿದ್ದಾಗ ಸಮಾಧಾನವಾಗಿ ಕೇಳುವುದಕ್ಕಾಗುವುದಿಲ್ಲವೇ?

ಅಧ್ಯಕ್ಷರು :– ಆಯಿತು. ಕೊನೇ ಪದ ಹೇಳಿಬಿಡಿ.

ಶ್ರೀ ಹೆಚ್. ನಿಂಗಪ್ಪ :– ಇಲ್ಲಿ ಯಾರೂ ಇಲ್ಲ, ಮಧ್ಯ ಎದ್ದು ನಿಂತುಕೊಂಡು ಮಾತನಾಡುವವರಿಲ್ಲ. ಹಾಗಿದ್ದಾಗ ಮಂತ್ರಿಗಳು ನಮಗೆ ಮಾತನಾಡುವುದಕ್ಕೆ ಬಿಡುತ್ತಿಲ್ಲ. ಏನೋ ಅದೃಷ್ಟ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ, ಮಂತ್ರಿಗಳು ಅವಕಾಶ ಕೊಡುತ್ತಿಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ :– ಈಗಾಗಲೇ 10 : 30 ಆಗಿದೆ. ಅವರು ಬರೀ ಸದಸ್ಯರಲ್ಲ. ಈ ಸರ್ಕಾರಕ್ಕೆ, ಮುಖ್ಯಮಂತ್ರಿಗಳಿಗೆ ಬಹಳ ಖಾಸಾ, 24 ಗಂಟೆ ಅವರ ಜೊತೆಯಲ್ಲಿ ಇರತಕ್ಕಂಥವರು. ಇಲ್ಲಿ ಯಾರೂ ಇಲ್ಲದೇ ಇರುವುದರಿಂದ ನಾನು ಉತ್ತರ ಕೊಡಬಹುದು ಎಂದುಕೊಂಡಿದ್ದೇನೆ. ತುಮಕೂರು ಜಿಲ್ಲೆಯಲ್ಲಿ ಕೋಟಿಗಟ್ಟಲೆ.....

ಶ್ರೀ ಹೆಚ್. ನಿಂಗಪ್ಪ :– ನೀವು ಮಂತ್ರಿಮಂಡಲದಲ್ಲಿ ಇದ್ದುಕೊಂಡು ಇನ್ನೂ ಹತ್ತಿರದಲ್ಲಿ ಇದ್ದೀರಿ. ನಾವು 75 ಕಿಲೋಮೀಟರ್.....

ಶ್ರೀ ಎನ್. ಚೆಲುವರಾಯಸ್ವಾಮಿ :– ಸ್ವಲ್ಪ ಕೇಳಿ. ಉತ್ತರ ಹೇಳಿಸಿಕೊಳ್ಳುವುದಾದರೆ ಹೇಳಿಸಿಕೊಳ್ಳಿ, ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಹೆಚ್. ನಿಂಗಪ್ಪ :– ಕುಳಿತುಕೊಳ್ಳುವುದಾದರೆ ಕುಳಿತುಕೊಳ್ಳಿ ಸಾರ್, ಬೆದರಿಕೆ ಹಾಕುತ್ತಿದ್ದೀರಾ? ನೀವು ಹೇಳಲೇಬೇಡಿ, ಏನಂತೆ? ಸರ್ಕಾರ ಉತ್ತರ ಕೊಡುವುದು ಬೇಡ. ನನಗೆ ಏನು ಹೇಳಬೇಕು ಅನಿಸುತ್ತದೆ, ಆ ಸಮಸ್ಯೆಗಳನ್ನು ಹೇಳಿಕೊಂಡು ಹೋಗುತ್ತೇನೆ. ಸಮಯ ಹತ್ತೂವರೆ ಅಲ್ಲ ಹನ್ನೆರಡು ಗಂಟೆಯಾಗಲಿ

ಬಿಡಿ. ಬಿಲ್ ಬರದಿದ್ದರೆ ಕಾಯುತ್ತಾ ಇರಲಿಲ್ಲವೇ? ದಯಮಾಡಿ ತುಮಕೂರು ವಿಶ್ವವಿದ್ಯಾಲಯದ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು ಎಂದು ನಾನು ಒತ್ತಾ ಮಾಡುತ್ತೇನೆ.

ಅಧ್ಯಕ್ಷರು :- ಆಯಿತು, ಪರಿಶೀಲನೆ ಮಾಡಿ ಮಾಡುತ್ತೇವೆಂದು ಹೇಳಿಬಿಡಿ.

ಶ್ರೀ ಎನ್. ಚೆಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೀವೇ ಹೇಳಿರುವುದರಿಂದ ನಮಗೆ ಭಾರ ಇಲ್ಲ. ಆದರೆ ಒಂದು ದುರಂತವೆಂದರೆ, ನೂರಾರು ಕೋಟಿಗಟ್ಟಲೆ ಅವರ ಕ್ಷೇತ್ರಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಶಕ್ತಿಯಿರುವಂತಹ ಪ್ರಭಾವಿ ಶಾಸಕರು ತುಮಕೂರು ಜಿಲ್ಲೆಯಲ್ಲಿದ್ದು, ಒಂದು ವಿಶ್ವವಿದ್ಯಾನಿಲಯ ಪ್ರಾರಂಭವಾಗತಕ್ಕಂಥಾದ್ದು ಬಹಳ ಅಪರೂಪ. ಅದು ಒಂದು ಸುದಿನ ಎಂದು ಅಂದುಕೊಳ್ಳುತ್ತೇನೆ. ಬೆಂಗಳೂರಿನಿಂದ ತೆಗೆದುಬಿಟ್ಟು ತುಮಕೂರಿಗೆ ಮಾಡಬೇಕಾದರೆ ಎಷ್ಟೊಂದು ಹೋರಾಟವನ್ನು ಸಂಘ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದ್ದನ್ನು ಸಹ ನೋಡಿದ್ದೇವೆ. ಇಂತಹ ಒಂದು ಒಳ್ಳೆಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದಮೇಲೆ ಇವರೆಲ್ಲರೂ ಕೂಡ ಇಲ್ಲಿಯವರೆಗೆ ಮೌನ ತಾಳಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗಿದೆ.

ಅಧ್ಯಕ್ಷರು :- ಅಲ್ಲ, ಒಳ್ಳೆಯ ತಮಾಷೆ, ನೀವು ಮಂತ್ರಿಗಳು indirect ಆಗಿ ಮಾತನಾಡುತ್ತೀರಲ್ಲ.

ಶ್ರೀ ಹೆಚ್. ನಿಂಗಪ್ಪ :- ತುಮಕೂರಿನಲ್ಲಿ ಶಾಸಕರು ಅಸಮರ್ಥರು ಎನ್ನುವ ರೀತಿಯಲ್ಲಿ indirect ಆಗಿ ಹೇಳುತ್ತಿದ್ದಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ :- ಖಂಡಿತವಾಗಿ ವಿಶ್ವವಿದ್ಯಾನಿಲಯಕ್ಕೆ ಕಟ್ಟಡ ಮತ್ತು ಮೂಲಭೂತ ಸೌಕರ್ಯ ಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಕೂಡಲೇ ಅದನ್ನು ಈ ವರ್ಷದ ಆದ್ಯತೆ ಮೇಲೆ ತೆಗೆದುಕೊಂಡು ಸರ್ಕಾರ complet ಮಾಡುವುದಕ್ಕೆ ಕ್ರಮ ತೆಗೆಮಕೊಳ್ಳುತ್ತದೆ.

ಅಧ್ಯಕ್ಷರು :- ಇನ್ನು ಯಾರು ಮಾತನಾಡುವವರು ಇದ್ದೀರಿ? ತಾವು ಮಾತನಾಡಿ.